

ಮೇಷ್ಟ್ರು ಮಾಡುವ ಪಾಠನಾ ಅರ್ಥ ಮಾಡಿಕೊಳ್ಳಲು ಶಕ್ತಿ ಬೇಕಲ್ವಾ, ಅದಕ್ಕೆ ಕಣೋ!

ಒಬ್ಬ ಜಿಪುಣ ತನ್ನ ಮಗನಿಗೆ ಜೋರಾಗಿ ಹೊಡೆಯುತ್ತಿರುತ್ತಾನೆ. ಅದನ್ನು ಕಂಡ ಪಕ್ಕದ ಮನೆಯವನು, 'ಯಾಕೆ ನಿಮ್ಮ ಮಗನಿಗೆ ಈ ಪರಿ ಹೊಡೆಯುತ್ತಿದ್ದೀರಿ' ಎಂದು ಪ್ರಶ್ನಿಸಿದ. ಅದಕ್ಕೆ ಜಿಪುಣ, "ಇವನಿಗೆ ಮೆಟ್ಟಿಲು ಹತ್ತುವಾಗ ಒಂದು ಮೆಟ್ಟಿಲು ಬಿಟ್ಟು ಒಂದು ಮೆಟ್ಟಿಲ್ಲನ್ನು ಹತ್ತು. ಹಾಗೆ ಮಾಡಿದರೆ ಚಪ್ಪಲಿ ಬೇಗ ಸವೆಯುವುದಿಲ್ಲ' ಎಂದು ಎಷ್ಟು ಹೇಳಿದರೂ ಇವನು ಎರಡೆರಡು ಮೆಟ್ಟಿಲು ಒಮ್ಮೆಯೇ ಹತ್ತುದ್ದಿದ್ದಾನೆ" ಎಂದ. ಅದಕ್ಕೆ ಪಕ್ಕದ ಮನೆಯವ, 'ಒಳ್ಳೆಯದೆ ಆಯ್ತಲ್ಲ. ಅದರಿಂದ ಚಪ್ಪಲಿ ಕಡಿಮೆ ಸವೆಯುತ್ತದೆ ಅಲ್ಲವೇ. ಮತ್ತೆ ಯಾಕೆ ಹೊಡೆಯುತ್ತಿದ್ದೀರಿ' ಎಂದ. ಅದಕ್ಕೆ ಜಿಪುಣ, 'ಚಪ್ಪಲಿ ಕಡಿಮೆ ಸವೆಯುತ್ತದೆ ನಿಜ. ಆದರೆ ಹಾಗೇ ಮಾಡಲು ಹೋಗಿ ಪದೇ ಪದೇ ಚಡ್ಡಿ ಹರಿದುಕೊಳ್ಳುತ್ತಿದ್ದಾನೆ!

***

ಬಸ್ಸಿನಲ್ಲಿ ಹೋಗುತ್ತಿರುವಾಗ ಒಬ್ಬ ಮಹಿಳೆ ಚಳಿಯಿಂದ ತುಂಬ ನಡುಗುತ್ತಿದ್ದಳು. ಅದನ್ನು ಕಂಡ ಗುಂಡ ತನ್ನ ಬಳಿ ಇದ್ದ ಶಾಲ್ ಅನ್ನು ಆ ಮಹಿಳೆಗೆ ಹೊದಿಸಿದ. ಅದನ್ನು ತೆಗೆದು ಬಿಸಾಡಿದ ಮಹಿಳೆ ಕೋಪದಿಂದ, 'ನಾನು ಬಡವಿಯಲ್ಲ ಮದುವೆಗೆ ಹೋಗುತ್ತಿದ್ದೇನೆ. ಶಾಲು ಹೊದ್ದುಕೊಂಡು ಮದುವೆಗೆ ಹೋದರೆ ನನ್ನ ಆಭರಣ ಕಾಣುವುದಾದರು ಹೇಗೆ' ಎಂದು ಪ್ರಶ್ನಿಸಿದಳು. ಆಗ ಗುಂಡನಿಗೆ ತನ್ನ ತಪ್ಪಿನ ಅರಿವಾಯಿತು.

***

ಸ್ಮಶಾನದ ಮುಂದೆ ಇಬ್ಬರು ಕುಳಿತು ಸಮಾಧಿಗಳನ್ನು ನೋಡುತ್ತಾ ಮಾತನಾಡುತ್ತಿದ್ದರು. ಆಗ ಒಬ್ಬ ಸಮಾಧಿಗಳತ್ತ ಕೈತೋರಿ, 'ನೋಡು ಅವರೆಲ್ಲರು ಎಷ್ಟು ಆರಾಮಾಗಿ ಮಲಗಿಕೊಂಡಿದ್ದಾರೆ' ಎಂದ. ಅಷ್ಟರೊಳಗೆ ಒಂದು ಹೆಣ ಎದ್ದು, 'ಯಾಕೆ ಮಲಗಿಕೊಳ್ಳಬಾರದು? ಜೀವ ಕೊಟ್ಟು ಈ ಜಾಗ ತಂಗೊಡ್ಡಿದ್ದೇವೆ' ಅಂತು. ಅಲ್ಲಿದ್ದ ಅವರಿಬ್ಬರೂ ಆಗ ಗಪ್‌ಚುಪ್.

**ಹೆಂಡತಿ:** ರಿ... ಏನ್ ಅಡುಗೆ ಮಾಡಲಿ ಇವತ್ತು?

**ಗಂಡ:** ಮನೆಯಲ್ಲಿ ಎಲ್ಲರಿಗೂ ಜ್ವರ, ಕೆಮ್ಮು, ನೆಗಡಿ ಇದೆ. ಅದಕ್ಕೆ ಡೊಲೊ 650 ಮಾತ್ರೆ ಹಾಕಿ ರುಚಿಯಾಗಿ ಸಾಂಬಾರ್ ಮಾಡು!

***

**ಗುಂಡ:** (ಡಾಕ್ಟರ್ ನೀಡಿದ ಚೀಟಿ ತೋರಿಸಿ) ಅಣ್ಣ ಜ್ವರಕ್ಕೆ ಔಷಧಿ ಕೊಡಿ. ಹಣ ನಾಳೆ ಕೊಡುವೆ.

**ಮೆಡಿಕಲ್ ಅಂಗಡಿಯವ:** ನೋಡು ಗುಂಡ ಡಾಕ್ಟರ್ ಬರೆದಿರುವ ಔಷಧಿಗೆ ಇನ್ನೂರು ರೂಪಾಯಿ ಆಗುತ್ತೆ. ಅಷ್ಟೊಂದು ಹಣ ನಿನಿಗೆ ಸಾಲವಾಗಿ ಕೊಡಲು ಆಗಲ್ಲ.

**ಗುಂಡ:** ಇಲ್ಲ ಅಣ್ಣ. ನಾಳೆ ಕೊಟ್ಟೆ ಕೊಡುತ್ತೇನೆ.

**ಮೆಡಿಕಲ್ ಅಂಗಡಿಯವ:** ಗುಂಡ, 'ನಮ್ಮಲ್ಲಿ ಮಾರಾಟವಾಗುವ ಎಲ್ಲಾ ಔಷಧಿಗಳ ಎಕ್ಸ್‌ಪೈರಿ ಡೇಟ್ ನಮಗೆ ತಿಳಿದಿದೆ. ಆದರೆ ನಿನ್ನದು ನನಗೆ ತಿಳಿದಿಲ್ಲ. ಹೀಗಾಗಿ ದಯವಿಟ್ಟು, ಉದ್ರಿ ಕೇಳಬೇಡ್ವೊ.

***

**ಗುಂಡ:** ಡಾಕ್ಟರ್ ನಾನು ಕನ್ನಡಕ ಹಾಕಿಕೊಂಡರೆ ಖಂಡಿತ ಓದಬಹುದು ತಾನೇ?

**ಡಾಕ್ಟರ್:** ಹೌದು ಖಂಡಿತ ಓದಬಹುದು



'ಅಲ್ಲಿಯವರೆಗೆ ಸಾರಾಯಿ ಅಂಗಡಿಗಳನ್ನು 24*7 ತೆರೆದಿರುವಂತೆ ಮಾಡಿ ಸರ್ ಅಂತ' ಹೇಳುತ್ತಿದ್ದಾನೆ ಸರ್.

ಧೈರ್ಯವಾಗಿರಿ.

**ಗುಂಡ:** ಹೌದಾ! ಇಷ್ಟು ದಿನ, 'ಜನ ಓದೋಕೆ ಬರೆಯೋಕೆ ಬರದ ಅನಕ್ಷರಸ್ಥ ನೀನು, ನಿನ್ನ ಜೀವನ ಒಂದು ಜೀವನಾನಾ' ಅಂತಿದ್ರು. ನಿಮ್ಮ ಮಾತು ಕೇಳಿ ಈಗ ಸಮಾಧಾನವಾಯ್ತು!

***

**ಟೀಚರ್:** ಆರೋಗ್ಯ ಸರಿಯಿಲ್ಲ ಎಂದು ಹತ್ತು ದಿನ ರಜೆ ಹಾಕಿದ್ಯಲ್ಲ, ಬರುವಾಗ ಡಾಕ್ಟರ್ ಸರ್ಟಿಫಿಕೇಟ್ ತಗೊಂಡು ಬಾ ಅಂದಿದ್ದೆ, ತಂದ್ಯಾ?

**ವಿದ್ಯಾರ್ಥಿ:** ನಾನು ಎಷ್ಟೇ ಕೇಳಿದರೂ ಅವರು ಕೊಡ್ಲಿಲ್ಲ. ಅದು ಅವ್ರು ಕಷ್ಟಪಟ್ಟು ಓದಿ ತೆಗೆದುಕೊಂಡಿರುವುದಂತೆ, ಕೊಡೊಲ್ಲ ಹೋಗೋ ಅಂದ್ರು ಟೀಚರ್!

***

**ತಿಮ್ಮ:** ನಮ್ಮ ಗೆಳೆತನ ಆಗಿ ಎಷ್ಟು ವರ್ಷ ಆಯ್ತು?

**ಗುಂಡ:** ವರ್ಷ ನೆನಪಿಲ್ಲ. ಆದರೆ ಆವಾಗ ಬಿಯರ್ ರೇಟ್ 45 ರೂಪಾಯಿ ಇತ್ತು.

***

ಅಪ್ಪ, ಒಂದು ತಬಲಾ ಕೊಡ್ಸಪ್ಪ.

**ಅಪ್ಪ:** ತಬಲಾ ಕೊಡಿಸಿದರೆ ವಿನಾಕಾರಣ ಅದನ್ನು ನೀನು ಬಾರಿಸುತ್ತಾ ಎಲ್ಲರಿಗೂ ತೊಂದರೆ ಕೊಡುತ್ತೀಯ. ಅದಕ್ಕೆ ನಾನು ನಿಂಗೆ ತಬಲ ಕೊಡಿಸುವುದಿಲ್ಲ.

**ಮಗ:** ಇಲ್ಲ ಅಪ್ಪ ಎಲ್ಲರು ಮಲಗಿ ಕೊಂಡ ಮೇಲೆ ನಾನು ಅದನ್ನು ಬಾರಿಸುತ್ತೇನೆ!

ಸಂಗ್ರಹ: ಶರದ ಕುಲಕರ್ಣಿ, ಬೀದರ್